ವಿತ್ತ ಸಂಚಿಕೆ
FEBRUARY 2026

INSPIRE INDIA

ಶರಣ್ ಪಾಟೀಲ್
ಆರ್ಥಿಕ ತಜ್ಞರು

ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com

"ತಂತ್ರಜ್ಞಾನ ಮಾನವ ಅಭಿವೃದ್ಧಿಯ ಬೃಹತ್ ಪ್ರೇರಕ ಶಕ್ತಿ. ಜನ ಹಿತಕ್ಕಾಗಿ ತಂತ್ರಜ್ಞಾನ ಬಳಸಲು ಸಾಧ್ಯವಾದರೆ, ಅದು ಅತ್ಯುತ್ತಮ ವ್ಯವಹಾರ.
~ಮುಕೇಶ್ ಅಂಬಾನಿ



"ಬದಲಾವಣೆಗಳು ಬಂದು ನಮ್ಮನ್ನು ಕುಗ್ಗಿಸುವ ತನಕ ಕಾಯಬಾರದು. ನಾವೇ ಬದಲಾವಣೆಯ ಹರಿಕಾರರಾಗಬೇಕು. ನಾವೇ ಬದಲಾವಣೆಯ ಹರಿಕಾರರಾಗಬೇಕು.
~ಆನಂದ್ ಮಹಿಂದ್ರಾ

"ನಿಮ್ಮ ಆಸಕ್ತಿಯನ್ನು ಅನುಸರಿಸುವುದು ಮತ್ತು ನಿಮ್ಮ ಹೃದಯಕ್ಕೆ ಹತ್ತಿರವಾದ ಕೆಲಸವನ್ನು ಮಾಡುವುದು ಯಶಸ್ಸಿನ ಸುವರ್ಣ ನಿಯಮ.
-ಕುಮಾರ ಮಂಗಲಂ ಬಿರ್ಲಾ

ಹಣಕ್ಕೂ ಇದೆ ಆರೋಗ್ಯ: ಚೆಕ್ ಇಟ್

ಹೊಸ ವರ್ಷಕ್ಕೊಂದು ನಿರ್ಣಯ

ಒಂದು ಹೊಸ ನೋಟ್-ಬುಕ್ಕನ್ನು ಕೈಗೆತ್ತಿಕೊಳ್ಳಿ. ಅದರ ಖಾಲಿ ಖಾಲಿ ಪುಟಗಳನ್ನು ಒಂದೊಂದಾಗಿ ತುಂಬುತ್ತ ಬನ್ನಿ. ನೀವು ಮಾಡಬಹುದಾದ ಹೊಸ ಸಾಧ್ಯತೆಗಳು, ಹಿಂದಿಗಿಂತ ಉತ್ತಮವಾಗಿ ಯಾವೆಲ್ಲ ಅವಕಾಶಗಳನ್ನು ಬಳಸಿ ಕೊಳ್ಳಬಹುದು ಎಂಬುದನ್ನು ಯೋಚಿಸಿ ಭರ್ತಿ ಮಾಡುತ್ತ ಬನ್ನಿ. ನಿಮ್ಮಲ್ಲಿ ಅನೇಕರು ಆರೋಗ್ಯಪೂರ್ಣ ಆಹಾರ ಸೇವಿಸಲು ನಿರ್ಣಯ ಕೈಗೊಂಡಿರುತ್ತೀರಿ ಅಥವಾ ಹೆಚ್ಚು ಹೆಚ್ಚು ವ್ಯಾಯಾಮ ಮಾಡಬೇಕು ಎಂದು ನಿರ್ಧರಿಸಿರುತ್ತೀರಿ. ಅವೆಲ್ಲವನ್ನೂ ನೋಟ್-ಬುಕ್‌ನಲ್ಲಿ ಫಿಲ್ ಮಾಡುತ್ತೀರಿ.

ಯಸ್! ಹೊಸ ವರುಷವನ್ನು ಆರಂಭ ಮಾಡುವುದೆಂದರೆ ಹೊಸ ನೋಟ್ ಬುಕ್ಕಿನಲ್ಲಿ ಹೊಸ ಯೋಜನೆಗಳನ್ನು ತುಂಬಿಸಿದ ಹಾಗೆ ಆದರೆ ಹಾಗೆ ನೋಟ್ ಬುಕ್ ಭರ್ತಿ ಮಾಡುವಾಗ ನಾವೆಲ್ಲ ಒಂದು ಬಹುಮುಖ್ಯ ಅಂಶವನ್ನು ಮರೆತಿರುತ್ತೇವೆ. ಅದು ನಮ್ಮ ಆರ್ಥಿಕ ಆರೋಗ್ಯ ತಪಾಸಣೆ. ಇದು ನಮ್ಮ ಜೀವನದ ಮೇಲೆ ಶಾಶ್ವತ ಪ್ರಭಾವ ಬೀರುವ ನಿರ್ಧಾರವಾಗಿರುತ್ತದೆ. ಆದರೆ ಅದರ ಬಗ್ಗೆ ನಾವು ಅಸಡ್ಡೆ ಮಾಡಿರುತ್ತೇವೆ. ಈ ಹಿನ್ನೆಲೆಯಲ್ಲಿ ಪೀಟರ್ ಡ್ರಕ್ಕರ್ ಅವರು ಹೇಳಿದ ಒಂದು ಮಾತು ಇಲ್ಲಿ ಉಲ್ಲೇಖನೀಯ. "ಭವಿಷ್ಯವನ್ನು ಊಹಿಸಲು ಇರುವ ಏಕೈಕ ಉತ್ತಮ ಮಾರ್ಗವೆಂದರೆ, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವುದು."

ವರ್ಷದ ಆರಂಭದಲ್ಲಿ ಮಾಡುವ ಒಂದು ಸರಳ ಆರ್ಥಿಕ ಆರೋಗ್ಯ ತಪಾಸಣೆಯು, ಮಾರುಕಟ್ಟೆಯ ಏರಿಳಿತಗಳು ಏನೇ ಇರಲಿ, ನೀವು ಆತ್ಮವಿಶ್ವಾಸದಿಂದ ಮತ್ತು ಸನ್ನದ್ಧರಾಗಿರಲು ಇದು ಖಂಡಿತ ಸಹಾಯ ಮಾಡುತ್ತದೆ.

1.ಮ್ಯೂಚುವಲ್ ಫಂಡ್ ಪೋರ್ಟ್ ಫೊಲಿಯೋ ಗುಣಮಟ್ಟ ಪರಿಶೀಲಿಸಿ:

ಅನೇಕ ಹೂಡಿಕೆದಾರರು ತಮ್ಮ ಮ್ಯೂಚುವಲ್ ಫಂಡ್ ಪೋರ್ಟ್ ಫೊಲಿಯೋವನ್ನು ಕೇವಲ ಒಂದು ಸಂಖ್ಯೆಯ ಆಧಾರದ ಮೇಲೆ ಅಳೆಯುತ್ತಾರೆ: ಅದುವೇ ರಿಟರ್ನ್ಸ್. ಆದರೆ ಇದು ಅಪೂರ್ಣ ಮತ್ತು ಕೆಲವೊಮ್ಮೆ ದಾರಿತಪ್ಪಿಸಬಹುದು. ಪರಿಪೂರ್ಣ ಪರಿಶೀಲನೆಗಾಗಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳಿ:

1.ನನ್ನ ಮ್ಯೂಚುವಲ್ ಫಂಡ್ ಪೋರ್ಟ್ ಫೊಲಿಯೋ ನಾನಾ ಆಸ್ತಿ ವಿಭಾಗಗಳಲ್ಲಿ ವೈವಿಧ್ಯಮಯವಾಗಿದೆಯೇ?

2.ನಾನು ಯಾವುದಾದರೂ ಒಂದು ನಿರ್ದಿಷ್ಟ ಥೀಮ್, ವಲಯ, ಫಂಡ್ ಅಥವಾ ಹೂಡಿಕೆಯ ಶೈಲಿಗೆ ಅತಿಯಾಗಿ ಒಡ್ಡಿಕೊಂಡಿದ್ದೇನೆಯೇ?

3.ಹೂಡಿಕೆಯ ಹಂಚಿಕೆಯು ನನ್ನ ಇಂದಿನ ಜೀವನದ ಹಂತಕ್ಕೆ ಅನುಗುಣವಾಗಿದೆಯೇ ಅಥವಾ ಐದು

ಒಳಪುಟ ನೋಟ
ಸಂಪತ್ತು ಬೆಳೆಯಲಿ: SWP ಎಂಬ ಮ್ಯಾಜಿಕ್ 3
ಆರೋಗ್ಯ ವಿಮೆ ಪೋರ್ಟ್‌ಗೆ ಮುನ್ನ ಇರಲಿ ಎಚ್ಚರಿಕೆ 5

ವರ್ಷಗಳ ಹಿಂದಿನ ನನ್ನ ಪರಿಸ್ಥಿತಿಗೆ ತಕ್ಕಂತಿದೆಯೇ?

ಬಲಿಷ್ಠವಾದ ಮ್ಯೂಚುವಲ್ ಫಂಡ್ ಪೋರ್ಟ್‌ಫೊಲಿಯೋಗಳು ನಿನ್ನೆಯ ಮಾರುಕಟ್ಟೆಗಾಗಿ ರೂಪಿತವಾಗಿರುವುದಿಲ್ಲ. ಅವು ಅನಿಶ್ಚಿತತೆಯನ್ನು ಎದುರಿಸಲು ಮತ್ತು ಎಂತಹ ಸಂದರ್ಭದಲ್ಲೂ ಬೆಳೆಯುವಂತೆ ವಿನ್ಯಾಸಗೊಳಿಸಲಾಗಿರುತ್ತವೆ.

2. ಹಣವನ್ನು ಕೇವಲ ಮಾರುಕಟ್ಟೆಗಲ್ಲ, ನಿಮ್ಮ ಜೀವನದ ಗುರಿಗಳಿಗೆ ಹೊಂದಿಸಿಕೊಳ್ಳಿ

ನಿಮ್ಮ ಹೂಡಿಕೆಗಳು ಮಾರುಕಟ್ಟೆಯ ಟ್ರೆಂಡ್‌ಗಳನ್ನಲ್ಲ, ಬದಲಿಗೆ ನಿಮ್ಮ ಜೀವನದ ಆದ್ಯತೆಗಳನ್ನು ಪ್ರತಿಬಿಂಬಿಸಬೇಕು. ಅದಕ್ಕಾಗಿ ನಿಮ್ಮನ್ನು ನೀವೇ ಹೀಗೆ ಕೇಳಿಕೊಳ್ಳಿ:

- ಮುಂದಿನ ಮೂರರಿಂದ ಐದು ವರ್ಷಗಳಲ್ಲಿ ಪೂರೈಸಲೇಬೇಕಾದ ಪ್ರಮುಖ ಆರ್ಥಿಕ ಗುರಿಗಳು ಯಾವುವು?
- ದೀರ್ಘಕಾಲದ ಸಂಪತ್ತು ವೃದ್ಧಿಗಾಗಿ ನಾನು ಯಾವ ಆದ್ಯತೆಗಳನ್ನು ಹೊಂದಿದ್ದೇನೆ?
- ಅಲ್ಪಾವಧಿಯ ಆರ್ಥಿಕ ಗುರಿಗಳು ಮಾರುಕಟ್ಟೆಯ ಏರಿಳಿತಗಳಿಂದ ಸುರಕ್ಷಿತವಾಗಿದೆಯೇ?

ಯಾವಾಗ ಹೂಡಿಕೆಗಳನ್ನು ಕಾಲಮಿತಿಗೆ ಅನುಗುಣವಾಗಿ ಸ್ಪಷ್ಟ ಯೋಜನೆಯನ್ನು ರೂಪಿಸಲಾಗುವುದೋ ಆಗ ಮಾರುಕಟ್ಟೆಯ ಗೊಂದಲಗಳು ತಮ್ಮ ಪ್ರಭಾವವನ್ನು ಕಳೆದುಕೊಳ್ಳುತ್ತವೆ. ಮಾರುಕಟ್ಟೆಯ ಮುನ್ಸೂಚನೆಗಳಿಗಿಂತ ಗುರಿಗಳ ಬಗೆಗಿನ ಸ್ಪಷ್ಟತೆಯು ನಿಮ್ಮ ಆತಂಕವನ್ನು ಹೆಚ್ಚು ಪರಿಣಾಮಕಾರಿಯಾಗಿ ಕಡಿಮೆ ಮಾಡುತ್ತದೆ.

3. ನಿಮ್ಮ SIP ಶಿಸ್ತನ್ನು ಪರಿಶೀಲಿಸಿ: ಮಾರುಕಟ್ಟೆಯ ಏರಿಳಿತಗಳು ಹೂಡಿಕೆಯ ಪಯಣದ ಒಂದು ಭಾಗ, ಆದರೆ ನಿರಂತರತೆಯೇ ಸಂಪತ್ತನ್ನು ವೃದ್ಧಿಸುತ್ತದೆ. SIPಗಳನ್ನು ನಿರ್ಲಕ್ಷಿಸುವುದಕ್ಕಿಂತ ಹೆಚ್ಚಾಗಿ, ಅವುಗಳನ್ನು ಕಾಲಕಾಲಕ್ಕೆ ಪರಿಶೀಲಿಸಿದಾಗ ಅವು ಉತ್ತಮ ಫಲಿತಾಂಶ ನೀಡುತ್ತವೆ.

"ನಾನು ನನ್ನ SIP ನಿಲ್ಲಿಸಬೇಕೆ?" ಎಂದು ಕೇಳುವ ಬದಲು, ಈ ಪ್ರಶ್ನೆಗಳನ್ನು ಕೇಳಿಕೊಳ್ಳಿ:

- ನನ್ನ ಆದಾಯದ ಬೆಳವಣಿಗೆಗೆ ಹೋಲಿಸಿದರೆ ನಾನು ಕಡಿಮೆ ಹೂಡಿಕೆ ಮಾಡುತ್ತಿದ್ದೇನೆಯೇ?
- ನನ್ನ SIPಗಳು ಸರಿಯಾದ ರಿಸ್ಕ್ ಪ್ರೊಫೈಲ್‌ಗೆ ಅನುಗುಣವಾಗಿವೆಯೇ?
- ನನ್ನ SIPಗಳು ಇಂದಿಗೂ ನನ್ನ ಹೂಡಿಕೆಯ ಕಾಲಾವಧಿಗೆ ಪೂರಕವಾಗಿವೆಯೇ?

ಮಾರುಕಟ್ಟೆಯು ಯಾವಾಗಲೂ ಸ್ಪಷ್ಟ ಗುರಿ ಹೊಂದಿರುವ ಶಿಸ್ತಿನ ಹೂಡಿಕೆದಾರರಿಗೆ ತಕ್ಕ ಪ್ರತಿಫಲ ನೀಡುತ್ತದೆ. ಸರಿಯಾಗಿ ರೂಪಿಸಲಾದ ಖಚಕ ಕಾರ್ಯತಂತ್ರವು ಮಾರುಕಟ್ಟೆಯ ಏರಿಳಿತದ ಅಪಾಯವನ್ನೇ ನಿಮಗೆ ಲಾಭವನ್ನು ತಂದುಕೊಡಬಲ್ಲದು.

4. ಆಸ್ತಿ ಹಂಚಿಕೆ ಮತ್ತು ಮರುಸಮತೋಲನ ಶಿಸ್ತನ್ನು ಪರಿಶೀಲಿಸಿ

ಆಸ್ತಿ ಹಂಚಿಕೆ ಎಂಬುದು ದೀರ್ಘಕಾಲೀನ ಹೂಡಿಕೆಯ ಬೆನ್ನೆಲುಬು. ಆದರೆ ಆರಂಭಿಕ ಹಂತದ ನಂತರ ಇದನ್ನು ಹೆಚ್ಚಾಗಿ ನಿರ್ಲಕ್ಷಿಸಲಾಗುತ್ತದೆ. ಅಂತಹ ಸಂದರ್ಭದಲ್ಲಿ ನಿಮ್ಮನ್ನು ನೀವೇ ಹೀಗೆ ಕೇಳಿಕೊಳ್ಳಿ:

- ಮಾರುಕಟ್ಟೆಯ ಚಲನೆಯು ನನ್ನ ಇಕ್ವಿಟಿ ಮತ್ತು ಸಾಲದ ಸಮತೋಲನವನ್ನು ವ್ಯತ್ಯಯಗೊಳಿಸಿದೆಯೇ?
- ಕೊನೆಯ ಬಾರಿಗೆ ನನ್ನ ಮ್ಯೂಚುವಲ್ ಫಂಡ್ ಪೋರ್ಟ್‌ಫೊಲಿಯೋವನ್ನು ಯಾವಾಗ ಮರುಸಮತೋಲನ ಮಾಡಲಾಗಿತ್ತು?
- ಹಂಚಿಕೆಯ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ನಾನು ವ್ಯವಸ್ಥಿತ ಕ್ರಮದ ಬದಲು ಭಾವನೆಗಳ ಒತ್ತಡಕ್ಕೆ ಒಳಗಾಗುತ್ತಿದ್ದೇನೆಯೇ?

ನಿಗದಿತ ಅವಧಿಯ ಮರುಸಮತೋಲನವು ನಿಮ್ಮಲ್ಲಿ ಶಿಸ್ತನ್ನು ಮೂಡಿಸುತ್ತದೆ ಇದು ಯಾವುದೇ ಭಾವನಾತ್ಮಕ ಒತ್ತಡವಿಲ್ಲದೆ, ಮಾರುಕಟ್ಟೆಯಲ್ಲಿ ಏರಿಕೆ ಉಂಟಾದಾಗ ಮಾರಿ ಲಾಭ ಗಳಿಸಲು ಮತ್ತು ಕಡಿಮೆಯಿದ್ದಾಗ ಖರೀದಿಸಲು ನಿಮಗೆ ಸಹಾಯ ಮಾಡುತ್ತದೆ.

5.ಮಾರುಕಟ್ಟೆ ಏರಿಳಿತವಲ್ಲ–ಸಿದ್ಧತೆ ಮಾಡಿಕೊಳ್ಳದಿರುವುದೇ ನಿಜವಾದ ಅಪಾಯ

ನಿಜವಾದ ಆರ್ಥಿಕ ಅಪಾಯ ಇರುವುದು ಮಾರುಕಟ್ಟೆಯ ಏರಿಳಿತಗಳಲ್ಲಿ ಅಲ್ಲ; ಬದಲಿಗೆ ಜೀವನದಲ್ಲಿ ಬದಲಾವಣೆಗಳು ಉಂಟಾದಾಗ ನಾವು ಅದಕ್ಕೆ ಸರಿಯಾಗಿ ಸಿದ್ಧತೆ ಮಾಡಿಕೊಳ್ಳದೇ ಇರುವುದು. ಈ ವರ್ಷ ಇವುಗಳನ್ನು ಪರೀಕ್ಷಿಸಲು ಸರಿಯಾದ ಸಮಯ:

- ನನ್ನ ಬಳಿ ತುರ್ತು ಪರಿಸ್ಥಿತಿಗಳಿಗೆ ಬೇಕಾದ ಸಾಕಷ್ಟು ನಗದು ಹಣ ಲಭ್ಯವಿದೆಯೇ?
- ನನ್ನ ಇಂದಿನ ಜವಾಬ್ದಾರಿಗಳಿಗೆ ನನ್ನ ವಿಮಾ ರಕ್ಷಣೆ ಸಾಕಾಗಿದೆಯೇ?
- ಹಠಾತ್ ಆದಾಯ ಸ್ಥಗಿತಗೊಂಡರೆ, ನನ್ನ ದೀರ್ಘಕಾಲೀನ ಹೂಡಿಕೆಗಳನ್ನು ಅವಧಿಗೂ ಮುನ್ನವೇ ಹಿಂಪಡೆಯುವ ಅನಿವಾರ್ಯತೆ ಎದುರಾಗಬಹುದೇ?

ಯಾವುದನ್ನಾದರೂ ಎದುರಿಸಬಲ್ಲ ಒಬ್ಬ ಹೂಡಿಕೆದಾರ ಅಪಾಯದಿಂದ ಓಡುವುದಿಲ್ಲ ಬದಲಿಗೆ ಅದನ್ನು ಬುದ್ಧಿವಂತಿಕೆಯಿಂದ ನಿರ್ವಹಿಸುತ್ತಾನೆ.

6. ತಜ್ಞರ ಮಾರ್ಗದರ್ಶನ ಕಾರ್ಯತಂತ್ರದ ಲಾಭವಾಗಲಿ:

ಅತ್ಯಂತ ಯಶಸ್ವಿ ಹೂಡಿಕೆದಾರರು ಎಲ್ಲವನ್ನೂ ಒಬ್ಬರೇ ಮಾಡುವುದಿಲ್ಲ. ನಿಮ್ಮ ವಿತರಕರೊಂದಿಗೆ ವಾರ್ಷಿಕವಾಗಿ ನಡೆಸುವ ಒಂದು ವ್ಯವಸ್ಥಿತ ವಿಮರ್ಶೆಯು ಈ ಕೆಳಗಿನವುಗಳಿಗೆ ಸಹಾಯ ಮಾಡುತ್ತದೆ:

- ಭಾವನಾತ್ಮಕ ಪಕ್ಷಪಾತವಿಲ್ಲದೆ ಪೋರ್ಟ್‌ಫೊಲಿಯೋ ಮರುಸಮತೋಲನ ಮಾಡಲು.
- ತೆರಿಗೆ ದಕ್ಷತೆಯನ್ನು ಸುಧಾರಿಸಲು.
- ಬದಲಾಗುತ್ತಿರುವ ನಿಯಮಗಳಿಗೆ ಅನುಸಾರವಾಗಿ ಹೂಡಿಕೆ ಇರುವಂತೆ ನೋಡಿಕೊಳ್ಳಲು.
- ಅಲ್ಪಕಾಲೀನ ಗೊಂದಲಗಳ ನಡುವೆಯೂ ದೀರ್ಘಕಾಲೀನ ಆದ್ಯತೆಗಳನ್ನು ಮರೆಯದಿರಲು.

ಉತ್ತಮ ಮಾರ್ಗದರ್ಶನವು ಮಾರುಕಟ್ಟೆಯನ್ನು ಊಹಿಸುವುದಿಲ್ಲ ಬದಲಿಗೆ ಅದು ನಿಮ್ಮ ನಿರ್ಧಾರಗಳನ್ನು ಸುರಕ್ಷಿತವಾಗಿರುವಂತೆ ಮಾಡುತ್ತದೆ.

ಮುಂಬರುವ ವರ್ಷಕ್ಕಾಗಿ ಹೂಡಿಕೆದಾರರ ಗೆಲುವಿನ ಸೂತ್ರ

"ಅವಸರಕ್ಕೆ ಬಿದ್ದು ಪ್ರತಿಕ್ರಿಯೆ ನೀಡುವುದರಿಂದ ಸಂಪತ್ತನ್ನು ಕಟ್ಟಲು ಸಾಧ್ಯವಿಲ್ಲ ಬದಲಾಗಿ ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವುದರಿಂದ ಸಾಧ್ಯವಾಗುತ್ತದೆ."

ವರ್ಷದ ಆರಂಭವನ್ನು ಸರಿಯಾದ ಆರ್ಥಿಕ ಆರೋಗ್ಯ ತಪಾಸಣೆಯೊಂದಿಗೆ ಮಾಡುವುದು ನಿಮಗೆ ಕೇವಲ ಅಂಕಿ–ಅಂಶಗಳನ್ನಷ್ಟೇ ನೀಡುವುದಿಲ್ಲ; ಬದಲಿಗೆ ಅದು ನಿಮಗೆ ನಿಯಂತ್ರಣ, ಆತ್ಮವಿಶ್ವಾಸ ಮತ್ತು ನಿರಂತರತೆಯನ್ನು ನೀಡುತ್ತದೆ. ಅನಿಶ್ಚಿತತೆಯಿಂದ ಕೂಡಿದ ಈ ಜಗತ್ತಿನಲ್ಲಿ, ಇದು ಅತ್ಯಂತ ಶಕ್ತಿಯುತವಾದ ಪ್ರಯೋಜನವೂ ಆಗಿದೆ.

ಈ ವರ್ಷ, ಕೇವಲ ನಿಮ್ಮ ಹೂಡಿಕೆಗಳನ್ನು ಗಮನಿಸಬೇಡಿ. ಬದಲಿಗೆ, ಆ ಹೂಡಿಕೆಗಳಿಗೆ ಆಧಾರವಾಗಿರುವ ನಿಮ್ಮ ಆರ್ಥಿಕ ಚೌಕಟ್ಟನ್ನು ಇನ್ನಷ್ಟು ಬಲಪಡಿಸಿಕೊಳ್ಳಿ.

ಹಕ್ಕುತ್ಯಾಗ (Disclaimer): ಮ್ಯೂಚುವಲ್ ಫಂಡ್ ಹೂಡಿಕೆಗಳು ಮಾರುಕಟ್ಟೆಯ ಅಪಾಯಗಳಿಗೆ ಒಳಪಟ್ಟಿರುತ್ತವೆ, ಹೂಡಿಕೆ ಮಾಡುವ ಮೊದಲು ಯೋಜನೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಎಚ್ಚರಿಕೆಯಿಂದ ಓದಿ. ಹಿಂದಿನ ಸಾಧನೆಯು ಭವಿಷ್ಯದಲ್ಲಿ ಮುಂದುವರಿಯಬಹುದು ಅಥವಾ ಮುಂದುವರಿಯದೇ ಇರಬಹುದು ಮತ್ತು ಇದು ಭವಿಷ್ಯದ ಯಾವುದೇ ಆದಾಯದ ಖಾತರಿಯಲ್ಲ.

SWP ಎಂಬ ಮ್ಯಾಜಿಕ್

ಸಂಪತ್ತು ಬೆಳೆಯಲಿ, ಆದಾಯ ಬರುತ್ತಿರಲಿ

ನಾವೆಲ್ಲರೂ ನಮ್ಮ ಇಡೀ ಜೀವನವನ್ನು ಹಣಕ್ಕಾಗಿ ದುಡಿಯುತ್ತಲೇ ಕಳೆಯುತ್ತೇವೆ. ಉಳಿತಾಯ ಮಾಡುತ್ತೇವೆ, ಕೆಲವು ಆಸೆಗಳನ್ನು ತ್ಯಾಗ ಮಾಡುತ್ತೇವೆ ಮತ್ತು ನಮ್ಮ ಖಾತೆ ಬೆಳೆಯುವುದನ್ನು ಬೆರಗುಗಣ್ಣಿನಿಂದ ನೋಡುತ್ತಾ ಕಾಯುತ್ತಿರುತ್ತೇವೆ. ಆದರೆ ಪ್ರತಿಯೊಬ್ಬ ಯಶಸ್ವಿ ಹೂಡಿಕೆದಾರನ ಜೀವನದಲ್ಲಿ ಒಂದು ಹಂತ ಬರುತ್ತದೆ, ಅಲ್ಲಿ ಈ ಪದ್ಧತಿ ಬದಲಾಗಬೇಕು: ಅದುವೇ ನಿಮ್ಮ ಹಣ ನಿಮಗಾಗಿ ಕೆಲಸ ಮಾಡಲು ಪ್ರಾರಂಭಿಸುವ ಸಮಯ.

ಹೆಚ್ಚಿನ ಜನ ಹೂಡಿಕೆಯಲ್ಲಿ ಕೇವಲ "ಹಣ ಉಳಿಸುವ" ಹಂತದ ಮೇಲೆ ಮಾತ್ರ ಗಮನ ಹರಿಸುತ್ತಾರೆ. ಆದರೆ ಅಸಲಿ ಕಾರ್ಯತಂತ್ರ ಅಡಗಿರುವುದು "ಹಣವನ್ನು ಬಳಸುವ" ಅಥವಾ "ಹಂಚಿಕೆಯ" ಹಂತದಲ್ಲಿ. ಇಲ್ಲಿಯೇ SWP ಪ್ರವೇಶ ಪಡೆಯುತ್ತದೆ. ನಿಮ್ಮ ಹೂಡಿಕೆಯ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳದೆಯೇ, ನಿಮಗಾಗಿ ಒಂದು "ಸ್ವಯಂ-ನಿರ್ಮಿತ ಪಿಂಚಣಿ"ಯನ್ನು ರೂಪಿಸಿಕೊಳ್ಳಲು ಇದು ಅತ್ಯಂತ ಪರಿಣಾಮಕಾರಿ ಮಾರ್ಗ.

SWP ಮೂಲಕ ನೀವು ನಿಮ್ಮ ಹೂಡಿಕೆಯ ಒಂದು ಭಾಗವನ್ನು ಹೂಡಿಕೆಯಲ್ಲೇ ಉಳಿಸಿಕೊಂಡು, ನಿಗದಿತ ಅವಧಿಯಲ್ಲಿ (ಮಾಸಿಕ, ತ್ರೈಮಾಸಿಕ ಅಥ ವಾ ವಾರ್ಷಿಕವಾಗಿ) ಸ್ಥಿರವಾದ ಮೊತ್ತವನ್ನು ಹಿಂಪಡೆಯಬಹುದು. ಇದು ನಿಮ್ಮ ಹಣದ ಹರಿವಿನಲ್ಲಿ ನಿರಂತರತೆ, ಶಿಸ್ತು ಮತ್ತು ಮುನ್ಸೂಚನೆಯನ್ನು ಖಚಿತಪಡಿಸುತ್ತದೆ.

ಸಾಂಪ್ರದಾಯಿಕ ಆದಾಯದ ಆಯ್ಕೆಗಳಿಗಿಂತ SWP ಏಕೆ ಭಿನ್ನವಾಗಿದೆ?

ನಿಶ್ಚಿತ ಠೇವಣಿ ಅಥವಾ ಬಡ್ಡಿ ಆಧಾರಿತ ಯೋಜನೆಗಳಿಗಿಂತ ಭಿನ್ನವಾಗಿ, SWPಯು ನಮ್ಯತೆ (Flexibility) ಮತ್ತು ದಕ್ಷತೆಯ ಮೇಲೆ ಕೆಲಸ ಮಾಡುತ್ತದೆ.

- ಎಷ್ಟು ಹಣ ಎಷ್ಟು ಬಾರಿ ಹಿಂಪಡೆಯಬೇಕು ಎಂಬುದನ್ನು ನೀವೇ ನಿರ್ಧರಿಸುತ್ತೀರಿ.
- ನಿಮ್ಮ ಉಳಿದ ಹೂಡಿಕೆಯು ಮಾರುಕಟ್ಟೆಯ ಬೆಳವಣಿಗೆಯಲ್ಲಿ ಭಾಗಿಯಾಗುವುದನ್ನು ಮುಂದುವರಿಸುತ್ತದೆ.

ಕಾಲಾನಂತರದಲ್ಲಿ, ಬೆಳವಣಿಗೆ ಮತ್ತು ಆದಾಯದ ನಡುವಿನ ಈ ಸಮತೋಲನವು ಈ ಕೆಳಗಿನ ಪ್ರಯೋಜನಗಳನ್ನು ನೀಡುತ್ತದೆ:

- ನಿಮ್ಮ ಒಟ್ಟು ಹೂಡಿಕೆಯ ಮೊತ್ತದ ಕಾಲಾವಧಿಯನ್ನು ಹೆಚ್ಚಿಸುತ್ತದೆ.
- ಮಾರುಕಟ್ಟೆಯ ಸರಿಯಾದ ಸಮಯಕ್ಕಾಗಿ ಕಾಯುವ ಒತ್ತಡವನ್ನು ಕಡಿಮೆ ಮಾಡುತ್ತದೆ.
- ಹಣದುಬ್ಬರದ ನಡುವೆಯೂ ನಿಮ್ಮ ಕೊಳ್ಳುವ ಶಕ್ತಿಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

ನಿಮ್ಮ ಹಣವು ನಿಮಗೆ ಪೂರಕವಾಗಿ ಬಳಕೆಯಾಗುತ್ತಿದ್ದರೂ, ಅದು ತನ್ನ ಬೆಳವಣಿಗೆಯ ಓಟವನ್ನು ನಿಲ್ಲಿಸುವುದಿಲ್ಲ.

ಎಲ್ಲವನ್ನೂ ಬದಲಿಸುವ ಗಣಿತ: ನಿಮ್ಮ ಬಳಿ ನಿವೃತ್ತಿಯ ನಂತರದ ಹೂಡಿಕೆಗಾಗಿ ರೂ. 1 ಕೋಟಿ ಹಣವಿದೆ ಮತ್ತು ನಿಮ್ಮ ನಿಯಮಿತ ಖರ್ಚುಗಳನ್ನು ಸರಿದೂಗಿಸಲು ಪ್ರತಿ ತಿಂಗಳು ಸುಮಾರು ರೂ. 50,000 ಅವಶ್ಯಕತೆಯಿದೆ ಎಂದು ಭಾವಿಸೋಣ. ಈ ಮೊತ್ತವನ್ನು ನೀವು ಸತತ 15 ವರ್ಷಗಳ ಕಾಲ ಹಿಂಪಡೆಯಲು ಯೋಜಿಸಿದ್ದೀರಿ.

ನಿಮ್ಮ ಹೂಡಿಕೆಯಿಂದ ನಿಯಮಿತ ಆದಾಯವನ್ನು ಪಡೆಯಲು ನಿಮ್ಮ ಮುಂದೆ ಎರಡು ಆಯ್ಕೆಗಳಿವೆ: ಬ್ಯಾಂಕ್ ನಿಶ್ಚಿತ ಠೇವಣಿ ಅಥವಾ ಹೈಬ್ರಿಡ್ ಮ್ಯೂಚುವಲ್ ಫಂಡ್ ಮೂಲಕ SWP.

ಇದರಲ್ಲಿ ಹೂಡಿಕೆ	ಬ್ಯಾಂಕ್ FD	MF- ಹೈಬ್ರೀಡ್
ಬಡ್ಡಿ/ಆದಾಯ	ಶೇ..6.05	ಶೇ..9.62
ಮಾಸಿಕ ಹಿಂಪಡೆಯುವಿಕೆ (Rs)	50417	50417
ಅವಧಿ (ವರ್ಷಗಳು)	15	15
ಒಟ್ಟು ಹಿಂಪಡೆಯುವಿಕೆ (Rs)	9075060	9075060
ಹೂಡಿಕೆ ಅವಧಿ ಅಂತ್ಯದ ಮೌಲ್ಯ (Rs)	10000000	20352948

ಹಣ ಹಿಂಪಡೆಯುವಿಕೆ ವ್ಯವಸ್ಥಿತ ವಾಗಿರುತ್ತದೆ; ಇದು ಯಾವುದೇ ಭಾವನಾತ್ಮಕ ಅಥವಾ ಆತುರದ ನಿರ್ಧಾರವಾಗಿರುವುದಿಲ್ಲ.

ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ನಿಮ್ಮ ಮ್ಯೂಚುವಲ್ ಫಂಡ್ ಪೋರ್ಟ್‌ಫೊಲಿಯೋ ನಿಮಗೆ ಹಣವನ್ನು ನೀಡಲು ಪ್ರಾರಂಭಿಸಿತು ಎಂಬ ಕಾರಣಕ್ಕೆ ಅದು ಬೆಳೆಯುವುದನ್ನು ನಿಲ್ಲಿಸುವುದಿಲ್ಲ.

ಭಾಗಶಃ ಹಿಂಪಡೆಯುವ ಶಕ್ತಿ: ಹಲವು ಹೂಡಿಕೆದಾರರು ಗಮನಿಸದ ಒಂದು ವಿಷಯವೆಂದರೆ: ನೀವು ಖಫಕ ಮೂಲಕ ಹಣವನ್ನು ಹಿಂಪಡೆದಾಗ, ಕೇವಲ ನಿಮ್ಮ ಹಿಂಪಡೆಯುವಿಕೆಗೆ ಸಮನಾದ ಮ್ಯೂಚುವಲ್ ಫಂಡ್ ಯುನಿಟ್ಗಳನ್ನು ಮಾತ್ರ ಮಾರಾಟ ಮಾಡಲಾಗುತ್ತದೆ. ನಿಮ್ಮ ಉಳಿದ ಹಣವು ಹೂಡಿಕೆಯಲ್ಲೇ ಮುಂದುವರಿಯುತ್ತದೆ ಮತ್ತು ಅದರ ಮೇಲಿನ ಚಕ್ರಬಡ್ಡಿಯ ಲಾಭ ಪಡೆಯುತ್ತಲೇ ಇರುತ್ತದೆ.

ಬ್ಯಾಂಕ್ FDಗಾಗಿ: 15/12/2025 ರಂದು ಇದ್ದ ಎಸ್.ಬಿ.ಐ ಎಫ್‌ಡಿ ದರವನ್ನು ಪರಿಗಣಿಸಲಾಗಿದೆ.

**ಹೈಬ್ರಿಡ್ ಫಂಡ್‌ಗಳಲ್ಲಿನ ಹೂಡಿಕೆಯನ್ನು ಮತ್ತು ವಾರ್ಷಿಕ ಸರಾಸರಿ 9.62% ಆದಾಯವನ್ನು ಅಂದಾಜು ಮಾಡಲಾಗಿದೆ. ಇದು 2024ರ ಸೆಪ್ಟೆಂಬರ್ 10ರ AMFI ಅತ್ಯುತ್ತಮ ಅಭ್ಯಾಸ ಮಾರ್ಗಸೂಚಿಗಳ ಸುತ್ತೋಲೆ ಸಂಖ್ಯೆ 109–A/2024–25 ಕ್ಕೆ ಅನುಗುಣವಾಗಿದೆ. "ಹಿಂದಿನ ಸಾಧನೆಯು ಭವಿಷ್ಯದಲ್ಲಿ ಮುಂದುವರಿಯಬಹುದು ಅಥವಾ ಮುಂದುವರಿಯದೇ ಇರಬಹುದು ಮತ್ತು ಇದು ಭವಿಷ್ಯದ ಯಾವುದೇ ಆದಾಯದ ಖಾತ–ರಿಯಲ್ಲ."

 ಆರಂಭಿಕ ಹೂಡಿಕೆಯ ರಕ್ಷಣೆ: ಬ್ಯಾಂಕ್ ಎಫ್.ಡಿ. ಆಯ್ಕೆಯಲ್ಲಿ, ನಿಮ್ಮ ಆರಂಭಿಕ 1 ಕೋಟಿ ಮೊತ್ತವು 15 ವರ್ಷಗಳ ಅಂತ್ಯದಲ್ಲೂ ಅಷ್ಟೇ ಇರುತ್ತದೆ. ಇದರರ್ಥ ನಿಮ್ಮ ಸಂಪತ್ತು ವೃದ್ಧಿಯಾಗಿಲ್ಲ; ಅದು ಕೇವಲ ಸ್ಥಗಿತಗೊಂಡಿದೆ.

 ಸಂಪತ್ತು ವೃದ್ಧಿಯ ಪರಿಣಾಮ: ಮ್ಯೂಚುವಲ್ ಫಂಡ್ ಹೈಬ್ರಿಡ್ ಯೋಜನೆಯಲ್ಲಿ, ಪ್ರತಿ ತಿಂಗಳು ಅದೇ ಮೊತ್ತದ ಹಣವನ್ನು ಹಿಂಪಡೆದ ಹೊರತಾಗಿಯೂ, ನಿಮ್ಮ ಅಂತಿಮ ಹೂಡಿಕೆಯ ಮೊತ್ತವು ರೂ. 2 ಕೋಟಿಗಿಂತ ಹೆಚ್ಚಾಗುತ್ತದೆ. ಇದು ನಿಮಗೆ ನಿಯಮಿತ "ಪಿಂಚಣಿ"ಯನ್ನು ನೀಡುತ್ತಲೇ, ನಿಮ್ಮ ಮೂಲ ಹೂಡಿಕೆಯನ್ನು ಎರಡರಷ್ಟು ಹೆಚ್ಚಿಸಿದಂತಾಗುತ್ತದೆ.

 ಆದಾಯದ ಶಕ್ತಿ: ಈ ವ್ಯತ್ಯಾಸಕ್ಕೆ ಮುಖ್ಯ ಕಾರಣ ಆದಾಯದ ದರ. ಎಫ್‌ಡಿ ಒಂದು ಸ್ಥಿರವಾದ ದರವನ್ನು ನೀಡಿದರೆ, ಹೈಬ್ರಿಡ್ ಯೋಜನೆಯ ಆದ–ಾಯವು ಪ್ರತಿ ತಿಂಗಳ ಹಣ ಹಿಂಪಡೆಯುವಿಕೆಯ ನಂತರವೂ ಉಳಿದ ಬಂಡವಾಳವು ಗಣನೀಯವಾಗಿ ವೃದ್ಧಿಯಾಗಲು ಸಹಾಯ ಮಾಡುತ್ತದೆ.

ಆದರೆ ನಿಲ್ಲಿ, ಇಲ್ಲಿ ತೆರಿಗೆ ಲಾಭವೂ ಇದೆ!

ಖಫಕ ಯೋಜನೆಯಲ್ಲಿರುವ ಅತ್ಯಂತ ಪ್ರಮುಖ ಹಾಗೂ ಗಮನಿಸದೇ ಇರುವ ಪ್ರಯೋಜನವೆಂದರೆ ಅದು ನೀಡುವ ತೆರಿಗೆ ದಕ್ಷತೆ. ನೀವು ಹಿಂಪಡೆಯುವ ಪ್ರತಿಯೊಂದು ಮೊತ್ತವು ಎರಡು ಭಾಗಗಳನ್ನು ಒಳಗೊಂಡಿರುತ್ತದೆ:

 ಅಸಲು: ಇದರ ಮೇಲೆ ತೆರಿಗೆ ಇರುವುದಿಲ್ಲ.

 ಲಾಭ: ಇದರ ಮೇಲೆ ಮಾತ್ರ ಬಂಡವಾಳ ಲಾಭದ ನಿಯಮಗಳ ಪ್ರಕಾರ ತೆರಿಗೆ ವಿಧಿಸಲಾಗುತ್ತದೆ.

ಸಂಪೂರ್ಣವಾಗಿ ತೆರಿಗೆಗೆ ಒಳಪಡುವ ಸಾಂಪ್ರದಾಯಿಕ ಬಡ್ಡಿಯಿಂದ ಲಭ್ಯವಾಗುವ ಆದ–ಾಯಕ್ಕೆ ಹೋಲಿಸಿದರೆ, ಖಫಕ ಹೂಡಿಕೆಯಲ್ಲಿ ನೀವು ಕಡಿಮೆ ತೆರಿಗೆಯನ್ನು ಪಾವತಿಸುತ್ತೀರಿ. ನಿಯಮಿತ ಆದಾಯವನ್ನು ಬಯಸುವ ಹೂಡಿಕೆದಾರರಿಗೆ ಈ ವ್ಯತ್ಯಾಸವು ದೀರ್ಘ ಅವಧಿಯಲ್ಲಿ ಬಹಳ ದೊಡ್ಡ ಲಾಭವನ್ನು ತಂದುಕೊಡುತ್ತದೆ.

ನೀವು ರೂ.50,000 ಹಿಂಪಡೆದಾಗ, ಅದು ಪೂರ್ತಿ ಲಾಭವಲ್ಲ. ನೀವು ನಿಮ್ಮ ಮೂಲ ಹೂಡಿಕೆ ಮತ್ತು ಲಾಭ ಎರಡನ್ನೂ ಒಳಗೊಂಡಿರುವ 'ಯೂನಿಟ್'ಗಳನ್ನು ಮಾರಾಟ ಮಾಡುತ್ತಿರುತ್ತೀರಿ. ಹೈಬ್ರಿಡ್ ಫಂಡ್‌ಗಳನ್ನು ಒಂದು ವರ್ಷಕ್ಕಿಂತ ಹೆಚ್ಚು ಕಾಲ ಹೊಂದಿದ್ದರೆ, ವಾರ್ಷಿಕ ರೂ. 1.25 ಲಕ್ಷಕ್ಕಿಂತ ಹೆಚ್ಚಿನ ದೀರ್ಘಕಾಲೀನ ಬಂಡವಾಳ ಲಾಭಕ್ಕೆ ಮಾತ್ರ ಶೇ.12.5 ತೆರಿಗೆ ಅನ್ವಯಿಸುತ್ತದೆ.

ಇದನ್ನು ಸಾಂಪ್ರದಾಯಿಕ ಪಿಂಚಣಿ ಅಥವಾ ನಿಶ್ಚಿತ ಠೇವಣಿಯ ಬಡ್ಡಿಗೆ ಹೋಲಿಸಿ ನೋಡಿ: ಅಲ್ಲಿ ಪ್ರತಿಯೊಂದು ರೂಪಾಯಿಯೂ ನಿಮ್ಮ ಆದಾಯ ತೆರಿಗೆ ಸ್ಲ್ಯಾಬ್‌ಗೆ (ಬಹುಶಃ ಶೇ.30 ಅಥವಾ ಹೆಚ್ಚು) ಅನುಗುಣವಾಗಿ ತೆರಿಗೆಗೆ ಒಳಪಡುತ್ತದೆ. ಶೇ.30 ತೆ–ರಿಗೆ ಸ್ಲ್ಯಾಬ್‌ಲ್ಲಿರುವ ವ್ಯಕ್ತಿಗೆ, ರೂ. 50,000 ಈಆ ಬಡ್ಡಿಯ ಮೇಲೆ ಅಂದಾಜು ರೂ.15,000 ತೆರಿಗೆ ಪಾವತಿಸಬೇಕಾಗುತ್ತದೆ. ಆದರೆ ಅದೇ ಮೊತ್ತವನ್ನು SWP ಮೂಲಕ ಹಿಂಪಡೆದಾಗ ಅತ್ಯಲ್ಪ ಅಥವಾ ಶೂನ್ಯ ತೆರಿಗೆ ಇರುತ್ತದೆ.

ಹತ್ತು ವರ್ಷಗಳ ಅವಧಿಯಲ್ಲಿ, ಈ ತೆ–ರಿಗೆಯ ವ್ಯತ್ಯಾಸವೊಂದೇ ನಿಮ್ಮ ಲಕ್ಷಾಂತರ ರೂಪಾಯಿಗಳನ್ನು SWPನಲ್ಲಿ ಗಮನಿಸಬೇಕಾದ

ಪ್ರಮುಖ ಅಂಶಗಳು: ಸುವರ್ಣ ನಿಯಮ

SWP ಒಂದು ಶಕ್ತಿಯುತ ಸಾಧನವಾಗಿದ್ದರೂ, ಅದರ ಯಶಸ್ಸು ಒಂದು ನಿರ್ಣಾಯಕ ಅಂಶದ ಮೇಲೆ ಅವಲಂಬಿತವಾಗಿರುತ್ತದೆ: ಅದೇ ಹಣ ಹಿಂಪಡೆಯುವಿಕೆಯ ದರ.

ನಿಮ್ಮ ಜೀವನದುದ್ದಕ್ಕೂ ನಿರಂತರ ಹಣದ ಹರಿವಿಗೆ ಈ ಮಾರ್ಗಸೂಚಿಗಳನ್ನು ನೆನಪಿನಲ್ಲಿಡಿ:

 ಸುಸ್ಥಿರತೆಯ ಅಂತರ: ನಿಮ್ಮ ಹಣ ಹಿಂಪಡೆಯುವಿಕೆಯ ದರವು ಆದರ್ಶಪ್ರಾಯವಾಗಿ ಫಂಡ್ ಗಳಿಸುವ ಆದಾಯಕ್ಕಿಂತ ಕಡಿಮೆ ಇರಬೇಕು. ಇದು ಆದಾಯದ ಒಂದು ಭಾಗವನ್ನು ಮರುಹೂಡಿಕೆ ಮಾಡಲು ಅನುವು ಮಾಡಿಕೊಡುತ್ತದೆ, ಇದ–ರಿಂದ ನಿಮ್ಮ ಹಣ ನಿಮಗೆ ಪಾವತಿಸುತ್ತಿರುವಾಗಲೇ ಬೆಳೆಯಲು ಸಹಾಯವಾಗುತ್ತದೆ.

 ಶೇ.4–6ರ ವ್ಯಾಪ್ತಿ: ಸಾಮಾನ್ಯವಾಗಿ, ವಾರ್ಷಿಕವಾಗಿ ಆರಂಭಿಕ ಮೊತ್ತದ ಶೇ.4ರಿಂದ 6 ರಷ್ಟು ಹಣವನ್ನು ಹಿಂಪಡೆಯುವುದು ಸುರಕ್ಷಿತ. ಉದಾಹರಣೆಗೆ, 1 ಕೋಟಿ ಮೊತ್ತದ ಮೇಲೆ ವಾರ್ಷಿಕ 4–6 ಲಕ್ಷ (ಮಾಸಿಕ 33,000 ರಿಂದ 50,000) ಹಿಂಪಡೆಯುವುದು ಹೆಚ್ಚಿನ ಮಾರುಕಟ್ಟೆ ಪರಿಸ್ಥಿತಿಗಳಲ್ಲಿ ಸುಸ್ಥಿರವಾಗಿರುತ್ತದೆ.

 ಹಣ ಬರಿದಾಗುವ ಅಪಾಯ: ಅತಿಯಾದ ಹಣ ಹಿಂಪಡೆಯುವಿಕೆಯ ದರವು "ಸೀಕ್ವೆನ್ಸ್ ಆಫ್ ರಿಟರ್ನ್ಸ್ ರಿಸ್ಕ್"ನ್ನು ಹೆಚ್ಚಿಸುತ್ತದೆ. ಒಂದು ವೇಳೆ ಮಾರುಕಟ್ಟೆಯು ಕೆಲವು ವರ್ಷಗಳ ಕಾಲ ಕಳಪೆ ಪ್ರದರ್ಶನ ನೀಡಿದರೆ, ಹೆಚ್ಚಿನ ಹಿಂಪಡೆಯುವಿಕೆಯ ದರವು ನಿಮ್ಮ ಅಸಲು ಮೊತ್ತವನ್ನು ಶೀಘ್ರವಾಗಿ ಖಾಲಿ ಮಾಡಬಹುದು. ಇದರಿಂದ ಮಾರುಕಟ್ಟೆ ಚೇತರಿಸಿಕೊಂಡಾಗ ಲಾಭ ಪಡೆಯಲು ನಿಮ್ಮ ಬಳಿ ಬಂಡವಾಳವೇ ಉಳಿಯುವುದಿಲ್ಲ.

ಯಾರಿಗೆ SWP ಪ್ರಯೋಜನಕಾರಿ?

SWP ಕೇವಲ ನಿವೃತ್ತರಿಗಾಗಿ ಮಾತ್ರವಲ್ಲ. ಇದು ಈ ಕೆಳಗಿನವರಿಗೂ ಉತ್ತಮ:

 ನಿವೃತ್ತಿಯ ನಂತರದ ಆದಾಯ ಬಯಸುವ ಹೂಡಿಕೆದಾರರಿಗೆ.

 ಎರಡನೇ ಆದಾಯದ ಮೂಲ ಸೃಷ್ಟಿಸಿಕೊಳ್ಳಲು ಬಯಸುವ ವ್ಯಕ್ತಿಗಳಿಗೆ.

 ಮಾಸಿಕ ಖರ್ಚುಗಳು ಅಥವಾ ಜೀವನಶೈಲಿಯ ಅಗತ್ಯಗಳಿಗಾಗಿ ಹಣದ ಅವಶ್ಯಕತೆ ಇರುವವರಿಗೆ.

 ತಮ್ಮ ದೀರ್ಘಕಾಲೀನ ಯೋಜನೆಗಳಿಗೆ ಧಕ್ಕೆ ತರದಂತೆ ನಿಯಮಿತ ಆದಾಯ ಪಡೆಯಲು ಬಯಸುವ ಹೂಡಿಕೆದಾರರಿಗೆ.

ಇದರಲ್ಲಿ ಯಶಸ್ವಿಯಾಗಲು ನಿಮ್ಮ ಕಾಲಾವಧಿ ಮತ್ತು ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯಕ್ಕೆ ಅನುಗುಣವಾಗಿ, ಹಣ ಹಿಂಪಡೆಯುವಿಕೆಯನ್ನು ವ್ಯವಸ್ಥಿತವಾಗಿ ಯೋಜಿಸುವುದು ಮುಖ್ಯ.

ನಿಮ್ಮ SWP ಕಾರ್ಯತಂತ್ರವನ್ನು ರೂಪಿಸುವುದು ಹೇಗೆ?

ಹಂತ 1: ನಿಮ್ಮ ಅಗತ್ಯದ ಲೆಕ್ಕಾಚಾರ: ನಿಮ್ಮ ಮಾಸಿಕ ಖರ್ಚುಗಳಿಂದ ಲೆಕ್ಕಾಚಾರ ಪ್ರಾರಂಭಿಸಿ, ಅದಕ್ಕೆ ಶೇ.20 ಹೆಚ್ಚುವರಿ ಹಣವನ್ನು ಸೇರಿಸಿ. ಹಾಗೆಯೇ ಪ್ರತಿ 2–3 ವರ್ಷಗಳಿಗೊಮ್ಮೆ ಹಣದುಬ್ಬರಕ್ಕೆ ಅನುಗುಣವಾಗಿ ಆಗುವ ಬದಲಾವಣೆಗಳನ್ನು ಪರಿಗಣಿಸಿ.

ಹಂತ 2: ಸರಿಯಾದ ಹೂಡಿಕೆ ಮಾರ್ಗವನ್ನು ಆರಿಸಿ: ದೀರ್ಘಕಾಲದ ಗುರಿಗಳಿಗಾಗಿ (10 ವರ್ಷಕ್ಕಿಂತ ಹೆಚ್ಚು ಸಮಯವಿದ್ದರೆ) ಹೈಬ್ರಿಡ್ ಫಂಡ್‌ಗಳನ್ನು ಮತ್ತು ಅಲ್ಪಾವಧಿಯ ಅಥವಾ ಸಂಪ್ರದಾಯಬದ್ಧ ಹೂಡಿಕೆದಾರರಿಗಾಗಿ ಸಾಲದ ಫಂಡ್ಗಳನ್ನು ಆಯ್ಕೆ ಮಾಡಿ.

ಹಂತ 3: ನಿಮ್ಮ ಯೋಜನೆಯನ್ನು ಪರೀಕ್ಷಿಸಿ: ನಿಮ್ಮನ್ನು ನೀವೇ ಹೀಗೆ ಕೇಳಿಕೊಳ್ಳಿ; "ಮುಂದಿನ ವರ್ಷ ಮಾರುಕಟ್ಟೆಯು ಶೇ.30ರಷ್ಟು ಕುಸಿತ ಕಂಡರೆ, ನನ್ನ ಹೂಡಿಕೆಯ ಮೊತ್ತವು ನನ್ನ ಹಣ ಹಿಂಪಡೆಯುವಿಕೆಯನ್ನು ನಿಭಾಯಿಸಬಲ್ಲದೇ?" ಒಂದು ವೇಳೆ ಸಾಧ್ಯವಿಲ್ಲ ಎಂದಾದರೆ, ನಿಮ್ಮ ಹಣ ಹಿಂಪಡೆಯುವಿಕೆಯ ಶೇಕಡಾವಾರು ಪ್ರಮಾಣವನ್ನು ಕಡಿಮೆ ಮಾಡಿ ಅಥವಾ ಡೆಟ್ ಹೂಡಿಕೆಯನ್ನು ಹೆಚ್ಚಿಸಿ.

ಹಂತ 4: ಮೇಲ್ವಿಚಾರಣೆ ಮತ್ತು ಹೊಂದಾಣಿಕೆ: ಪ್ರತಿ ಆರು ತಿಂಗಳಿಗೊಮ್ಮೆ ನಿಮ್ಮ ಹೂಡಿಕೆಯ ಆರೋಗ್ಯವನ್ನು ಪರಿಶೀಲಿಸಿ. ಹಣ ಹಿಂಪಡೆಯುತ್ತಿದ್ದರೂ ನಿಮ್ಮ ಹೂಡಿಕೆಯ ಮೊತ್ತ ಬೆಳೆಯುತ್ತಿದ್ದರೆ, ನೀವು ಸುರಕ್ಷಿತವಾಗಿದ್ದೀರಿ ಎಂದರ್ಥ. ಒಂದು ವೇಳೆ ಅದು ನಿರೀಕ್ಷೆಗಿಂತ ವೇಗವಾಗಿ ಕುಸಿಯುತ್ತಿದ್ದರೆ, ನಿಮ್ಮ ಯೋಜನೆಯನ್ನು ಮರುಹೊಂದಿಸಿ.

"ನೀವು ಕೇವಲ ಎಷ್ಟು ಹಣವನ್ನು ಕೂಡಿಟ್ಟಿದ್ದೀರಿ ಎಂಬುದು ಸಂಪತ್ತಲ್ಲ, ಬದಲಿಗೆ ಆ ಹಣವನ್ನು ನೀವು ಎಷ್ಟು ಬುದ್ಧಿವಂತಿಕೆಯಿಂದ ಬಳಸುತ್ತಿದ್ದೀರಿ ಎಂಬುದೇ ನೈಜ ಸಂಪತ್ತು."

SWP ನಿಮ್ಮ ಹಣವು ತಾನು ಮಾಡಬೇಕಾದ ಕೆಲಸವನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ. ಅಂದರೆ, ನಿಮ್ಮ ಹೂಡಿಕೆಯು ಖಾಲಿಯಾಗದಂತೆ ನಿಮ್ಮ ಜೀವನಕ್ಕೆ ಆಧಾರವಾಗಿ ನಿಲ್ಲುತ್ತದೆ.

ಆರೋಗ್ಯ ವಿಮೆ ಪೋರ್ಟ್‌ಗೆ ಮುನ್ನ ಇರಲಿ ಎಚ್ಚರಿಕೆಯ ನಡೆ

ಇಂದು ಕುಟುಂಬಕ್ಕೆ ಅತ್ಯಗತ್ಯವಾದ ಆರ್ಥಿಕ ರಕ್ಷಣೆಗಳಲ್ಲಿ ಆರೋಗ್ಯ ವಿಮೆ ಕೂಡ ಮುಖ್ಯವಾದುದು. ವೈದ್ಯಕೀಯ ವೆಚ್ಚಗಳು ಪ್ರತಿ ವರ್ಷ ಏರುತ್ತಲೇ ಇವೆ, ಮತ್ತು ಒಂದು ಉತ್ತಮ ಆರೋಗ್ಯ ವಿಮಾ ಪಾಲಿಸಿಯು ತುರ್ತು ವೈದ್ಯಕೀಯ ಸಂದರ್ಭಗಳಲ್ಲಿ ನಿಮ್ಮನ್ನು ಭಾರೀ ಆರ್ಥಿಕ ಒತ್ತಡದಿಂದ ಉಳಿಸಬಲ್ಲದು.

ಅನೇಕ ಪಾಲಿಸಿದಾರರು ಯಾವುದೋ ಒಂದು ಹಂತದಲ್ಲಿ, ಪ್ರೀಮಿಯಂ ಹೆಚ್ಚಳ, ಸೇವಾ ಸಮಸ್ಯೆಗಳು, ಕ್ಲೈಮ್‌ಗೆ ಸಂಬಂಧಿಸಿದ ತೊಂದರೆಗಳು ಅಥವಾ ಮಾರುಕಟ್ಟೆಯಲ್ಲಿ ಲಭ್ಯವಿರುವ ಉತ್ತಮ ಆಯ್ಕೆಗಳ ಕಾರಣದಿಂದಾಗಿ ತಮ್ಮ ಈಗಿನ ಆರೋಗ್ಯ ವಿಮಾ ಕಂಪನಿಯ ಬಗ್ಗೆ ಅತೃಪ್ತಿ ಹೊಂದುತ್ತಾರೆ. ಇಂತಹ ಸಂದರ್ಭದಲ್ಲಿಯೇ 'ಆರೋಗ್ಯ ವಿಮೆ ಪೋರ್ಟಿಬಿಲಿಟಿ' ಅಥವಾ ವಿಮಾ ಕಂಪನಿ ಬದಲಾವಣೆಯು ಮುನ್ನೆಲೆಗೆ ಬರುತ್ತದೆ.

ಆರೋಗ್ಯ ವಿಮೆ ಪೋರ್ಟಿಬಿಲಿಟಿ ಎಂದರೆ ಏನು? ಆರೋಗ್ಯ ವಿಮೆ ಪೋರ್ಟಿಬಿಲಿಟಿ ಎನ್ನುವುದು ನೀವು ಈಗಾಗಲೇ ಗಳಿಸಿರುವ ಕೆಲವು ಪ್ರಯೋಜನಗಳನ್ನು ಕಳೆದುಕೊಳ್ಳದೆ, ನಿಮ್ಮ ಪ್ರಸ್ತುತ ಆರೋಗ್ಯ ವಿಮಾ ಪಾಲಿಸಿಯನ್ನು ಒಂದು ವಿಮಾ ಕಂಪನಿಯಿಂದ ಇನ್ನೊಂದಕ್ಕೆ ವರ್ಗಾಯಿಸಲು ಅವಕಾಶ ನೀಡುವ ಸೌಲಭ್ಯ.

ಸರಳವಾಗಿ ಹೇಳುವುದಾದರೆ, ಇದರರ್ಥ:

- ನೀವು ನಿಮ್ಮ ವಿಮಾ ಕಂಪನಿಯನ್ನು ಬದಲಾಯಿಸಬಹುದು.
- ಹಾಗೆಯೇ, ಅಸ್ತಿತ್ವದಲ್ಲಿರುವ ಕಾಯಿಲೆಗಳಿಗಾಗಿನ ಕಾಯುವ ಅವಧಿ (Waiting period) ಮತ್ತು ಸಂಚಿತ ಬೋನಸ್‌ಗಳು (Cumulative bonuses) ಮುಂತಾದ ಸೌಲಭ್ಯಗಳನ್ನು ಮುಂದುವರಿಸಿಕೊಂಡು ಹೋಗಬಹುದು.

ನಿಖರವಾಗಿ ಯಾವುದನ್ನು 'ಪೋರ್ಟ್' (ವರ್ಗಾವಣೆ) ಮಾಡಲಾಗುತ್ತದೆ?

ನೀವು ಹೊಸ ಆರೋಗ್ಯ ವಿಮೆಯನ್ನು ಖರೀದಿಸಿದಾಗ, ಸಾಮಾನ್ಯವಾಗಿ ನೀವು ಕೆಲವು 'ಕಾಯುವ ಅವಧಿಗಳನ್ನು' ಪೂರೈಸಬೇಕಾಗುತ್ತದೆ (ಉದಾಹರಣೆಗೆ: ಮಧುಮೇಹ ಅಥವಾ ಥೈರಾಯ್ಡ್‌ನಂತಹ ಮೊದಲೇ ಇರುವ ಕಾಯಿಲೆಗಳಿಗೆ 2 ರಿಂದ 4 ವರ್ಷಗಳು ಮತ್ತು ಕ್ಯಾಟರಾಕ್ಟ್ ಅಥವಾ ಕಿಡ್ನಿ ಕಲ್ಲುಗಳಂತಹ ನಿರ್ದಿಷ್ಟ ಶಸ್ತ್ರಚಿಕಿತ್ಸೆಗಳಿಗೆ 2 ವರ್ಷಗಳು).

- ಒಂದು ವೇಳೆ ನೀವು ಈಗಾಗಲೇ 'ಕಂಪನಿ ಂ' ನಲ್ಲಿ 5 ವರ್ಷಗಳ ಕಾಲ ಪಾಲಿಸಿಯನ್ನು ಹೊಂದಿದ್ದರೆ, ನೀವು ಈ ಕಾಯುವ ಅವಧಿಗಳನ್ನು ಈಗಾಗಲೇ ಪೂರೈಸಿರುತ್ತೀರಿ. ನೀವು 'ಕಂಪನಿ B' ಗೆ ಪೋರ್ಟ್ ಮಾಡಿದಾಗ, ಕಂಪನಿ B ಆ ಸಮಯವನ್ನು ಗೌರವಿಸಲು ಒಪ್ಪುತ್ತದೆ. ನಿಮ್ಮ ಮಧುಮೇಹದ ಕವರೇಜ್‌ಗಾಗಿ ಅವರು ಮತ್ತೆ 4 ವರ್ಷ ಕಾಯುವಂತೆ ಕೇಳುವುದಿಲ್ಲ. ಈ "ಪೂರೈಸಿದ ಸಮಯದ ವರ್ಗಾವಣೆ"ಯೇ ಪೋರ್ಟಿಬಿಲಿಟಿಯ ಮುಖ್ಯ ಉದ್ದೇಶ.

ನಿಮ್ಮ ಆರೋಗ್ಯ ವಿಮೆ ಪೋರ್ಟ್ ಮಾಡುವುದನ್ನು ಯಾವಾಗ ಪರಿಗಣಿಸಬೇಕು?

ಪೋರ್ಟಿಬಿಲಿಟಿಯು ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಬಹಳ ಉಪಯುಕ್ತ. ಈ ಕೆಳಗಿನ ಸಂದರ್ಭಗಳಲ್ಲಿ ನೀವು ನಿಮ್ಮ ಪಾಲಿಸಿ ಪೋರ್ಟ್ ಮಾಡುವುದನ್ನು ಪರಿಗಣಿಸಬಹುದು:

1. ಕಳಪೆ ಕ್ಲೈಮ್ ಅನುಭವ: ಒಂದು ವೇಳೆ ನಿಮ್ಮ ವಿಮಾ ಕಂಪನಿಯು ಈ ಕೆಳಗಿನ ತೊಂದರೆಗಳನ್ನು ನೀಡುತ್ತಿದ್ದರೆ:

- ಸೂಕ್ತ ಕಾರಣವಿಲ್ಲದೆ ಕ್ಲೈಮ್‌ಗಳನ್ನು ವಿಳಂಬ ಮಾಡುತ್ತಿದ್ದರೆ
- ಅತಾರ್ಕಿಕವಾಗಿ ಅಥವಾ ಸರಿಯಾದ ಕಾರಣ ನೀಡದೆ ಕ್ಲೈಮ್‌ಗಳನ್ನು ಅಂಶಿಕವಾಗಿ ಅಥವಾ ಪೂರ್ಣವಾಗಿ ತಿರಸ್ಕರಿಸುತ್ತಿದ್ದರೆ
- ಕಳಪೆ ಗ್ರಾಹಕ ಸೇವೆಯನ್ನು ಹೊಂದಿದ್ದರೆ

2. ಸೀಮಿತ ಆಸ್ಪತ್ರೆಗಳ ಜಾಲ: ಒಂದು ವೇಳೆ ನಿಮ್ಮ ವಿಮಾ ಕಂಪನಿಯು ಈ ಕೆಳಗಿನ ಸೌಲಭ್ಯಗಳನ್ನು ಹೊಂದಿಲ್ಲದಿದ್ದರೆ:

- ನಿಮ್ಮ ನಗರದಲ್ಲಿ ಉತ್ತಮ ಮತ್ತು ಹೆಚ್ಚಿನ ಸಂಖ್ಯೆಯ ನೆಟ್ವರ್ಕ್ ಆಸ್ಪತ್ರೆಗಳು ಇಲ್ಲದಿದ್ದರೆ.
- ಪ್ರಮುಖ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸಾ ಸೌಲಭ್ಯ ಲಭ್ಯವಿಲ್ಲದಿದ್ದರೆ.

3. ಅಪೂರ್ಣ ಅಥವಾ ಅಸಮರ್ಪಕ ವಿಮಾ ರಕ್ಷಣೆ

ಒಂದು ವೇಳೆ ನಿಮ್ಮ ಪ್ರಸ್ತುತ ಆರೋಗ್ಯ ವಿಮಾ ಪಾಲಿಸಿಯು:

- ಕಡಿಮೆ ವಿಮಾ ಮೊಬಲಗನ್ನು ಹೊಂದಿದ್ದರೆ (ಕಡಿಮೆ ರಿಸ್ಕ್ ಕವರ್ ಮೊತ್ತ).
- ಆಧುನಿಕ ಚಿಕಿತ್ಸೆಗಳನ್ನುಒಳಗೊಂಡಿರದೇ ಇದ್ದರೆ.
- ರೂಮ್ ಬಾಡಿಗೆಯಲ್ಲಿ ನಮ್ಯತೆ ಇಲ್ಲದಿರುವುದು ಅಥವಾ ಕೆಲವು ಚಿಕಿತ್ಸೆಗಳ ಮೇಲೆ ಉಪ-ಮಿತಿಗಳನ್ನು ಹೊಂದಿರುವುದು ಮುಂತಾದ ವೈಶಿಷ್ಟ್ಯಗಳ ಕೊರತೆ ಹೊಂದಿದ್ದರೆ;

4.ಅಸಮರ್ಪಕ ಅಥವಾ ಕಠಿಣ ಪಾಲಿಸಿ ನಿಯಮಗಳು

ಕೆಲವು ಹಳೆಯ ಆರೋಗ್ಯ ಪಾಲಿಸಿಗಳು ಈ ಕೆಳಗಿನ ನಿಯಮಗಳನ್ನು ಹೊಂದಿರುತ್ತವೆ:

- ಕಾಯಿಲೆ ಆಧಾರಿತ ಉಪ-ಮಿತಿಗಳು: ನಿರ್ದಿಷ್ಟ ಕಾಯಿಲೆಗಳ ಚಿಕಿತ್ಸೆಗೆ ಇಂತಿಷ್ಟೇ ಹಣ ಎಂದು ಮಿತಿ ಇರುವುದು.
- **ರೂಮ್ ಬಾಡಿಗೆ ಮಿತಿ:** ಆಸ್ಪತ್ರೆಯ ರೂಮ್ ಬಾಡಿಗೆಗೆ ಇಂತಿಷ್ಟೇ ಮೊತ್ತ ಎಂದು ಮಿತಿ

ನಿಗದಿಪಡಿಸಿರುವುದು.

- **ಕೋ–ಪೇಮೆಂಟ್ ನಿಬಂಧನೆಗಳು:** ಚಿಕಿತ್ಸಾ ವೆಚ್ಚದ ಒಂದು ಭಾಗವನ್ನು ಪಾಲಿಸಿದಾರರೇ ಪಾವತಿಸಬೇಕೆಂಬ ನಿಯಮ.

ನಿಮ್ಮ ಆರೋಗ್ಯ ವಿಮೆಯನ್ನು ಯಾವಾಗ ಪೋರ್ಟ್ ಮಾಡಬಾರದು?

ಪೋರ್ಟಿಂಗ್ ಯಾವಾಗಲೂ ಸರಿಯಾದ ನಿರ್ಧಾರವಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಅನೇಕ ಸಂದರ್ಭಗಳಲ್ಲಿ, ನಿಮ್ಮ ಪ್ರಸ್ತುತ ವಿಮಾದಾರರ ಬಳಿಯೇ ಮುಂದುವ–ರಿಯುವುದು ಉತ್ತಮ.

ಪ್ರೀಮಿಯಂನಲ್ಲಿನ ಸಣ್ಣ ಉಳಿತಾಯಕ್ಕಾಗಿ ನೀವು ಏಕೆ ಬದಲಾಯಿಸಬಾರದು?

ಭಾರತದಲ್ಲಿ ನಮಗೆ ಅಗ್ಗದ ದರದಲ್ಲಿ ವಸ್ತುಗಳನ್ನು ಪಡೆಯುವುದೆಂದರೆ ತುಂಬಾ ಇಷ್ಟ. ಒಂದು ವೇಳೆ 'ಕಂಪನಿ A' 25,000 ರೂ. ಪ್ರೀಮಿಯಂ ವಿಧಿಸುತ್ತಿದ್ದು, 'ಕಂಪನಿ B' 22,000 ರೂ. ವಿಧಿಸುತ್ತಿದ್ದರೆ, ಕೇವಲ 3,000 ರೂ. ಉಳಿಸಲು ಪಾಲಿಸಿಯನ್ನು ಬದಲಾಯಿಸುವುದು ಸಹಜ ಸ್ವಭಾವ. ಆದರೆ ಇದು ಅಪಾಯಕಾರಿಯಾಗಿ ಪರಿಣಮಿಸಬಹುದು.

- **ಆಮಿಷದ ದರಗಳು:** ಹೊಸ ವಿಮಾ ಕಂಪನಿಗಳು ನಿಮ್ಮನ್ನು ಆಕರ್ಷಿಸಲು ಆರಂಭದಲ್ಲಿ ಕಡಿಮೆ ಪ್ರೀಮಿಯಂ ನೀಡಬಹುದು. ಆದರೆ ಮುಂದಿನ ಒಂದು ಅಥವಾ ಎರಡು ವರ್ಷಗಳಲ್ಲಿ ಅವರು ಪ್ರೀಮಿಯಂ ದರ ಹೆಚ್ಚಿಸಬಹುದು, ಇದರಿಂದ ನೀವು ಮತ್ತೆ ಮೊದಲಿನ ಸ್ಥಿತಿಗೇ ತಲುಪುತ್ತೀರಿ.
- **ಗುಪ್ತ ನಿಬಂಧನೆಗಳು:** ಆ ಅಗ್ಗದ ಪಾಲಿಸಿಯು 'ರೂಮ್ ರೆಂಟ್ ಕ್ಯಾಪಿಂಗ್' (ಉದಾಹರಣೆಗೆ: ಅವರು ಕೇವಲ ಸೆಮಿ–ಪ್ರೈವೇಟ್ ರೂಮ್ಗೆ ಮಾತ್ರ ಹಣ ಪಾವತಿಸಬಹುದು) ಅಥವಾ 'ಕೋ–ಪೇ' (ಪ್ರತಿ ಬಿಲ್‌ನಲ್ಲಿ ನೀವು ಶೇ.20 ಹಣ ಪಾವತಿಸಬೇಕು) ಎಂಬ ನಿಯಮಗಳನ್ನು ಹೊಂದಿರಬಹುದು. ಆದರೆ ನಿಮ್ಮ ಪ್ರಸ್ತುತ ಪಾಲಿಸಿಯು ಶೇ.100 ಬಿಲ್ ಪಾವತಿಸುವ ಸೌಲಭ್ಯ ಹೊಂದಿರಬಹುದು.
- **ಕ್ಲೈಮ್ ಸೆಟಲ್ಮೆಂಟ್ನಲ್ಲಿನ ಸಮಸ್ಯೆಗಳು:** ನೀವು 3,000 ರೂ. ಉಳಿಸುತ್ತಿರಬಹುದು, ಆದ–ರೆ ನಿಮ್ಮ ಪ್ರಸ್ತುತ ಕಂಪನಿಗಿಂತ ಹೆಚ್ಚು ಕ್ಲೈಮ್ ಸಮಸ್ಯೆಗಳನ್ನು ಹೊಂದಿರುವ ಕಂಪನಿಗೆ ನೀವು ಬದಲಾಗುತ್ತಿರಬಹುದು. ತುರ್ತು ವೈದ್ಯಕೀಯ ಸಂದರ್ಭದಲ್ಲಿ ಅಂತಹ ಅಪಾಯವನ್ನು ಎದು–ರಿಸುವುದು ಆ ಸಣ್ಣ ಉಳಿತಾಯಕ್ಕೆ ಯೋಗ್ಯವೇ? ಯೋಚಿಸಿ.

ಸುವರ್ಣ ನಿಯಮ: ಪ್ರೀಮಿಯಂ ಸ್ವಲ್ಪ ಕಡಿಮೆ ಇದೆ ಎಂಬ ಒಂದೇ ಕಾರಣಕ್ಕಾಗಿ ಎಂದಿಗೂ ಪಾಲಿಸಿಯನ್ನು ಪೋರ್ಟ್ ಮಾಡಬೇಡಿ. ಕೇವಲ ಅದರ ಮೌಲ್ಯ (ವೈಶಿಷ್ಟತೆಗಳು + ಸೇವೆ) ಉತ್ತಮವಾಗಿದ್ದರೆ ಮಾತ್ರ ಪೋರ್ಟ್ ಮಾಡಿ.

ನಿಮಗೆ ಮೊದಲೇ ಕಾಯಿಲೆಗಳಿದ್ದರೆ:

ಒಂದು ವೇಳೆ ನೀವು ಈಗಾಗಲೇ ಈ ಕೆಳಗಿನಂತಹ ಆರೋಗ್ಯ ಸ್ಥಿತಿಗಳನ್ನು ಹೊಂದಿದ್ದರೆ:

- ಹೃದಯ ಕಾಯಿಲೆ
- ಸಂಕೀರ್ಣ ಮಧುಮೇಹ
- ಕ್ಯಾನ್ಸರ್ ಹಿನ್ನೆಲೆ
- ಮೂತ್ರಪಿಂಡದ ಸಮಸ್ಯೆಗಳು

ಇಂತಹ ಸಂದರ್ಭದಲ್ಲಿ, ಪೋರ್ಟಿಂಗ್ ಮಾಡುವುದು ಅಪಾಯಕಾರಿಯಾಗಬಹುದು. ಏಕೆಂದರೆ ಹೊಸ ವಿಮಾದಾರರು ನಿಮ್ಮ ಪ್ರಸ್ತಾವನೆಯನ್ನು ತಿರಸ್ಕ–ರಿಸಬಹುದು, ಅಥವಾ ಶಾಶ್ವತವಾದ 'ಕೋ–ಪೇ' ಅಥವಾ ಮಿತಿಗಳನ್ನು ವಿಧಿಸಬಹುದು. ಇದರ ಪರಿಣಾಮವಾಗಿ ನಿಮ್ಮ ವಿಮಾ ರಕ್ಷಣೆ ಕಡಿಮೆಯಾಗಬಹುದು.

ವೈದ್ಯಕೀಯ ಚಿಕಿತ್ಸೆಯ ಯೋಜನೆ ಹೊಂದಿದ್ದರೆ:

ಮುಂಬರುವ ದಿನಗಳಲ್ಲಿ ಅಥವಾ ತಿಂಗಳುಗಳಲ್ಲಿ ನೀವು ಶಸ್ತ್ರಚಿಕಿತ್ಸೆ ಅಥವಾ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವಂತಹ ಯೋಜನೆಯನ್ನು ಹೊಂದಿದ್ದರೆ, ಅಂತಹ ಚಿಕಿತ್ಸೆಯ ಸ್ವಲ್ಪ ಮೊದಲು ಅಥವಾ ತಕ್ಷಣವೇ ನಿಮ್ಮ ಪಾಲಿಸಿಯನ್ನು ಪೋರ್ಟ್ ಮಾಡಬೇಡಿ. ವಿಮಾ ಕಂಪನಿಗಳು ಬದಲಾವಣೆಯ ಈ ಹಂತದಲ್ಲಿ ಕ್ಲೈಮ್ ಮಾಡುವುದು ಸಂಕೀರ್ಣವಾಗಬಹುದು.

ಯಾವಾಗಲೂ ನಿಮ್ಮ ವಿಮಾ ಸಲಹೆಗಾರರನ್ನು ಏಕೆ ಸಂಪರ್ಕಿಸಬೇಕು?

ಒಬ್ಬ ಅರ್ಹ ವಿಮಾ ಸಲಹೆಗಾರರು: ಪಾಲಿಸಿಯ ಪ್ರಯೋಜನಗಳು ಮತ್ತು ಅದರ ಕಾರ್ಯವೈಖ–ರಿಯನ್ನು ಅರ್ಥಮಾಡಿಕೊಳ್ಳುತ್ತಾರೆ, ಕಂಪನಿಗಳ ಕ್ಲೈಮ್ ಸೆಟಲ್ಮೆಂಟ್ ದಾಖಲೆಗಳನ್ನು ತಿಳಿದಿರುತ್ತಾರೆ ಮತ್ತು ಕೇವಲ ಪ್ರೀಮಿಯಂ ಮಾತ್ರವಲ್ಲದೆ ದೀರ್ಘಕಾಲೀನ ಅಂಶಗಳ ಮೌಲ್ಯಮಾಪನ ಮಾಡುತ್ತಾರೆ.

INSPIRE INDIA
WEALTH PVT LTD
ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ಮುಚ್ಚುಯಲ್ ಫಂಡ್ | ಸ್ಟಾಕ್ ಬ್ರೋಕಿಂಗ್ | ಹೂಡಿಕೆ ಯೋಜನೆ | ರಿಯಲ್ ಎಸ್ಟೇಟ್ | ತೆರಿಗೆ ಉಳಿತಾಯ ಬಾಂಡ್ | ವಿಮೆ | ಸಂಪತ್ತಿನ ನಿರ್ವಹಣೆ | ಹೂಡಿಕೆಗಳ ಮೌಲ್ಯಮಾಪನ | ತೆರಿಗೆ ಸಲ್ಲಿಕೆ | ಲಿಲ್ ಬರವಣಿಗೆ

ಹೆಸರು ಸಿಕ್ಕೆ ಇ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com

ಮೊದಲು ಸದ್ಧಿಲ್ಲದೇ ದುಡಿಯುತ್ತಿರಿ, ನಿಮ್ಮ ಯಶಸ್ಸು ಸದ್ದು ಮಾಡಲಿ